ಶ್ರೀ ಎಚ್. ಎಂ. ಚನ್ನಬಸಪ್ಪ.— ಇಂಥ ಪ್ರಸಂಗಗಳು ನಡೆಯಬಾರದು, ಅದಕ್ಕೆ ಶಾಸನ ವಿಧಾಯಕ ನಿಯಮಗಳು ಇವೆ. ಇವುಗಳನ್ನು ಪರಿಪಾಲನೆ ಮಾಡುವುದಕ್ಕೆ ಶಿಬ್ಬಂದಿ ಇದೆ, ಆ ಸಿಬ್ಬಂದಿ ವಿಧ ನಿಯಮಗಳಿಗನುಗುಣವಾಗಿ ಕೆಲಸಮಾಡುತ್ತಿದೆ.

LAND GRANTED FOR CASHEW CULTIVATION IN SAGAR TALUK

166. *Sri* Kagodu Thimmappa (Sagar) :—Will the Minister for Revenue be pleased to state :—

(*a*) the extent of land granted for cashew cultivation from 1970 to end of 1973 in Sagar Taluk and the names of the villages and the names of the grantees ;

(*b*) whether it has come to the notice of the Government that cashew is not cultivated in the land granted for cashew cultivation ;

(*c*) if so, whether government intends to resume the land since no cashew is cultivated so for?

Sri *N.* Hutchamasthy Gowda (Minister for Revenue) :—

(*a*) *Village*	*Extent* A-G	*Name of Grantees*
Udri	4-00	Vasudev Shetty Bin Lingashetty
Udri	4-00	Manja Shetty Bin Linga Shetty
Mathikoppa	5-00	Govinda Rao Bin Venkataramanaiah
Malpe	8-00	Ramakrishnappa Bin Venkatagiriyappa

(SRI N. HUTCHAMASTHY GOWDA)

Athavadi	9-00	Khagaseu Gurumurthy Bin Krishnaiah
Total	30-00	

(*b*) No.

(*c*) Does not arise.

ಶ್ರೀ ಕಾಗೋಡು ತಿಮ್ಮಪ್ಪ:—ಮಾಲ್ಪೆಯಲ್ಲಿ 8 ಎಕರೆ, ಮತ್ತು ಆತವಾಡಿಯಲ್ಲಿ 9 ಎಕರೆ ಭೂಮಿಯನ್ನು ಗೇರು ಸಾಗುವಳಿಗೋಸ್ಕರ ಕೊಟ್ಟಿದ್ದೀರಿ, ಇವರಿಗೆ ಸಾಕಷ್ಟು ಜಮೀನು ಇದ್ದಾಗ್ಯೂ ಕೂಡ ಜಮೀನು ಕೊಟ್ಟಿರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

‡ಶ್ರೀ ಎನ್ ಹುಚ್ಚಮಾಸ್ತಿಗೌಡ:—ಇದು ಒಂದು ಸ್ಪೆಷಲ್ ಸ್ಕೀಂ, ಜಮೀನು ಇರಲಿ, ಇಲ್ಲದೆ ಇರಲಿ, ಅದನ್ನು ಲೆಕ್ಕಕ್ಕೆ ತೆಗೆದುಕೊಂಡು ಕೊಡತಕ್ಕದ್ದು ಅಲ್ಲ. ಜಮೀನು ಕೊಟ್ಟಿರುವುದು ಗೇರು ಬೆಳೆಯುವುದಕ್ಕೋಸ್ಕರ. ಜಮೀನು ಇರುವ ವಿಷಯವನ್ನು ಲೆಕ್ಕಕ್ಕೆ ತೆಗೆದುಕೊಂಡು ಕೊಟ್ಟಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :— ಗೇರು ಸಾಗುವಳಿಗೋಸ್ಕರ ಕೊಟ್ಟ ಜಮೀನಿಯಲ್ಲಿ ಗೇರು ಸಾಗುವಳಿ ಮಾಡದೆ ಇದ್ದ ಪಕ್ಷದಲ್ಲಿ ಆ ಜಮೀನನ್ನು ವಾಪಸ್ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಈಗಿರುವ ಲೆಕ್ಕದ ಪ್ರಕಾರ 1970ನೇ ಇಸವಿಯಲ್ಲಿ ಇದನ್ನು ಕೊಟ್ಟಿರುವುದು. ಈ ಜಮೀನನ್ನು ಪಡೆದುಕೊಂಡಿರುವವರು ಮೂರು ವರ್ಷದಲ್ಲಿ ಗೇರು ವ್ಯವಸಾಯವನ್ನು ಮಾಡಬೇಕು ಎನ್ನುವ ಶರತ್ತು ಇದೆ. ಈ 3 ವರ್ಷ ವಾಯಿದೆ ತುಂಬಿದ ಕೂಡಲೆ ಶರತ್ತಿನ ಪ್ರಕಾರ ಅವನು ಸಾಗುವಳಿ ಮಾಡಿದ್ದಾನೆಯೇ ಇಲ್ಲವೇ ಎನ್ನುವುದನ್ನು ನೋಡಿ, ಮಾಡಿಲ್ಲ ಎಂದರೆ ಅದನ್ನು ವಜಾ ಮಾಡುತ್ತೇವೆ. ಉಳಿದ ಕೇಸುಗಳಲ್ಲಿಯೂ ಇದೇ ರೀತಿ ಲೆಕ್ಕಕ್ಕೆ ತೆಗೆದುಕೊಂಡು ಶರತ್ತಿನ ಪ್ರಕಾರ ಅವರು ನಡೆಯದಿದ್ದರೆ ಅವನಿಗೆ ಕೊಟ್ಟಿರುವ ಜಮೀನನ್ನು ವಜಾ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ :—ಗೇರು ಸಾಗುವಳಿಗೆ ಏನು ಜಮೀನನ್ನು ಕೊಟ್ಟಿದ್ದೀರಿ, ಅದರಲ್ಲಿ ಜಮೀನು ಇಲ್ಲದೆ ಇರುವವರು ಜಮೀನನ್ನು ಕೇಳಿದರೂ

ಕೊಟ್ಟಿಲ್ಲ. ಜಮೀನು ಇದ್ದವರಿಗೆ ಕೊಡತಕ್ಕ ವ್ಯವಸ್ಥೆ ಇರುವುದರಿಂದ, ಭೂಮಿ ಇಲ್ಲದೆ ಇರುವವರಿಗೆ ಭೂಮಿ ಸಿಗುತ್ತಿಲ್ಲ. ಇದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಇದು ವಿಶೇಷ ಕಾರ್ಯಕ್ರಮ, ಅವರ ಕಷ್ಟ ಅನಿವಾರ್ಯ. ಅದನ್ನು ತಪ್ಪಿಸುವುದು ಕಷ್ಟ.

ಶ್ರೀ ಕೋಣಂದೂರು ಲಿಂಗಪ್ಪ :—ವಿಶೇಷ ಸಂದರ್ಭ ಏನು ಇವೆ ? ಕೇವಲ ಶ್ರೀಮಂತರಿಗೆ ಈ ಜಮೀನು ಮೀಸಲಾಗಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಯಾರು ಇದಕ್ಕೆ ಅರ್ಜಿ ಹಾಕಿ ಮುಂದೆ ಬರುತ್ತಾರೋ ಅವರಿಗೆ ಕೊಟ್ಟಿದೆ, ಇದರಲ್ಲಿ ಶ್ರೀಮಂತರೇ ಬರಬಹುದು, ಜಮೀನು ಇಲ್ಲದೆ ಇರತಕ್ಕವರು ಬರಬಹುದು. ಯಾರು ಇದನ್ನು ಮೂರು ವರ್ಷದಲ್ಲಿ ಮಾಡುತ್ತೇವೆ, ಅದರ ಲಾಭವನ್ನು ಪಡೆಯುತ್ತೇವೆ ಎಂದು ಧೈರ್ಯವಾಗಿ ಅರ್ಜಿ ಹಾಕುತ್ತಾರೋ ಅವರಿಗೆ ಜಮೀನನ್ನು ಮಂಜೂರು ಮಾಡುವಾಗ ಸ್ವಲ್ಪ ಈ ರೀತಿ ಯಾಗಿ ಆಗಿದೆಯೇ ಹೊರತು ಇಂಥವರಿಗೇ ಕೊಡಬೇಕು ಎನ್ನುವ ಪ್ರತಿಬಂಧಕ ಏನೂ ಇಲ್ಲ.

ಶ್ರೀ ಎಚ್. ಜಿ. ಚೆನ್ನಪ್ಪ :—ಗೇರು ಸಾಗುವಳಿಗಾಗಿ ಜಮೀನು ಪಡೆದು ಇರತಕ್ಕವರು ಈ ಸ್ಕೀಂನ ಉದ್ದೇಶವನ್ನು ಈಡೇರಿಸುವರೇ ಇಲ್ಲವೇ ಎನ್ನುವುದರ ಬಗ್ಗೆ ತಾವು ಅಂಕಿ ಅಂಶಗಳನ್ನು ಶೇಖರಣೆ ಮಾಡಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಈಗ ತಾನೇ ಹೇಳಿದ್ದೇನೆ.

ಶ್ರೀ ಕೆ. ಎನ್. ವೀರಪ್ಪಗೌಡ :—ಗೇರು ಸಾಗುವಳಿಗೆ ಅರ್ಜಿ ಹಾಕಿ ಕೊಂಡಿರುವವರು ಸ್ವಲ್ಪ ಮಟ್ಟಿಗೆ ಜಮೀನ್ದಾರರೇ, ಅವರು ಬೇರೆಯವರನ್ನು ಬಿಡಿಸುವುದಕ್ಕೋಸ್ಕರ ಅನುಕೂಲವಾಗತಕ್ಕ ರೀತಿಯಲ್ಲಿ ಅರ್ಜಿ ಹಾಕಿದ್ದಾರೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು :—ಅದಕ್ಕೋಸ್ಕರ ಯಾರು ಅರ್ಜಿ ಹಾಕುತ್ತಾರೆ ?

ಶ್ರೀ ಕೆ. ಟಿ. ಹನುಮೇಗೌಡ :—ಜಮೀನು ಕೊಟ್ಟವರಿಗೆ ಇಪ್ಪತ್ತು ಅಡಿ ದೂರದಲ್ಲಿ ಗಿಡಗಳನ್ನು ಹಾಕಬೇಕು ಎಂದು ನಿಯಮ ಇದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಅದಕ್ಕೆ ತೋಟಗಾರಿಕೆ ಇಲಾಖೆಯವರು ಮತ್ತು ನಮ್ಮ ಇಲಾಖೆಯವರ ಸಹಾಯವನ್ನು ಪಡೆದುಕೊಂಡು, ಎಷ್ಟು ದೂರ ದಲ್ಲಿ ಗೇರು ಗಿಡಗಳನ್ನು ಹಾಕಬೇಕು ಎನ್ನುವುದನ್ನೆಲ್ಲಾ ವಿಚಾರ ಮಾಡಿ ಅದರ ಪ್ರಕಾರ ಅನುಸರಣೆ ಮಾಡಿದ್ದಾರೆ. ಈ ಗಿಡಗಳನ್ನು ಹಾಕುವಾಗ ನುಮ್ಮನೆ ಅಧಿಕಾರಿಗಳ ಕಣ್ಣಿಗೆ ಮಣ್ಣು ಎರಚುವುದಕ್ಕೆ ಮಾಡಿದ್ದಾರೆಯೇ, ಅಥವಾ ನಿಜ ವಾಗಿ ಈ ವ್ಯವಸಾಯವನ್ನು ಪೂರ್ಣವಾಗಿ ಮಾಡಿದ್ದಾರೆಯೇ ಎನ್ನುವುದನ್ನು ಪರಿ ಶೀಲನೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್ ;—ಮಾನ್ಯ ಮಂತ್ರಿಗಳು ಈ ಸ್ಕೀಂ ನಲ್ಲಿ ಜಮೀನನ್ನು ಶ್ರೀಮಂತರಿಗೂ ಮತ್ತು ಬಡವರಿಗೂ ಕೊಡುತ್ತೇವೆ ಎನ್ನತಕ್ಕ ತತ್ವವನ್ನು ಒಂದೇ ಸಮನಾಗಿ ಹೇಳಿದರು. ಈ ರೀತಿ ಬಡವರಿಂದ ಅರ್ಜಿಗಳು ಬಂದಾಗ ಇವರಿಗೆ ಹೆಚ್ಚಿಗೆ ಪ್ರಾಧಾನ್ಯತೆ ಕೊಡತಕ್ಕ ನೀತಿಯನ್ನು ಸರ್ಕಾರ ಅನುಸರಿಸುತ್ತದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ .— ಇಲ್ಲಿಯವರೆಗೆ ತೆಗೆದುಕೊಂಡಿ ರುವ ಕ್ರಮ ಯ್ಯಾವರೀತಿಯಾಗಿದೆ ಎನ್ನುವುದನ್ನು ಹೇಳಿದ್ದೇನೆ. ಇಂಥ ವರಿಗೆ ಕೊಡಬೇಕು ಇಂಥವರಿಗೆ ಕೊಡಬಾರದು ಎನ್ನುವುದನ್ನು ದೃಷ್ಟಿಯಲ್ಲಿಟ್ಟು ಕೊಂಡು ಮಾಡುವುದಕ್ಕೆ ಈ ಸ್ಕೀಂ ಪ್ರಕಾರ ಸಾಧ್ಯವಿಲ್ಲ. ಇನ್ನು ಮುಂದೆ ಕೊಡುವಾಗ, ಜಮೀನು ಇಲ್ಲದೆ ಇರುವವರಿಗೆ, ಅವರು ಈ ಸಾಗುವಳಿಮಾಡುತ್ತೇ ವೆಂದು ಸಿದ್ಧವಾಗಿ ಮುಂದೆ ಬಂದರೆ ಅವರಿಗೆ ಪ್ರಾಧಾನ್ಯತೆ ಕೊಡುವುದಕ್ಕೆ ತಿಳು ವಳಿಕೆ ಕೊಡುತ್ತೇವೆ.

ಶ್ರೀ ಎಸ್. ಹೆಚ್. ಪುಟ್ಟರಂಗನಾಥ್ :—ಗೇರು ಸಾಗುವಳಿಗೆ ಜಮೀನು ತೆಗೆದುಕೊಂಡಿರುವವರೆಲ್ಲರೂ ಶ್ರೀಮಂತರೇ ಎನ್ನುವುದನ್ನು ಸಭೆಯ ಸದಸ್ಯರೆಲ್ಲರೂ ಹೇಳಿದ್ದಾರೆ. ಜೊತೆಗೆ ಇವರಿಗೆ ಇದಕ್ಕಾಗಿ ಸಾಲವನ್ನು ಸರ್ಕಾರದವರು ಕೊಡು ತ್ತಿದ್ದಾರೆ. ಇನ್ನು ಮುಂದೆ ಈ ರೀತಿ ಮಾವುಡುದಕ್ಕೆ ಹೋಗದಂತೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ ;—ಇದು ಒಂದು ವಿಶೇಷ ಯೋಜನೆ, ಇದಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬೇಕು, ಇದನ್ನು ಬೆಳೆಯುವುದರಿಂದ ನಮ್ಮ ರಾಜ್ಯಒಂದೇ ಅಲ್ಲ, ಇಡೀ ದೇಶಕ್ಕೇ ಸಹಾಯವಾಗುತ್ತದೆ. ಇದರಿಂದ ವಿದೇಶ ವಿನಿಮಯ ಸಂಪಾದನೆ ಮಾಡಲಕ್ಕೆ ಅವಕಾಶ ಇರುವುದರಿಂದ ಈ ಕಾರ್ಯಕ್ರಮ ವನ್ನು ನಾವು ಕೈಗೊಂಡಿದ್ದೇವೆ. ಇದರಲ್ಲಿ ಕೆಲವು ನ್ಯೂನತೆಗಳು ಇರಬಹುದು, ಯಾರು ಇದನ್ನು ಮಾಡುವುದಕ್ಕೆ ಸಿದ್ಧವಾಗಿ ಮುಂದೆ ಬರುತ್ತಾರೆ, ಅವರಿಗೆ ಈ

ಸಹಾಯವನ್ನು ಕೊಡಬೇಕೇ ಹೊರತು ಸಾಗುವಳಿ ಮಾಡದೆ ಇರುವವರಿಗೆ ಜಮೀನು ಕೊಡುವುದಾಗಲೀ ಹಣ ಸಹಾಯ ಮಾಡುವುದಾಗಲೀ ಮಾಡುವುದಿಲ್ಲ. ಸಾಗುವಳಿ ಮಾಡದೆ ಇರತಕ್ಕವರಿಂದ ಜಮೀನನ್ನು ವಾಪಸ್ ತೆಗೆದುಕೊಳ್ಳುವುದರಲ್ಲಿ ಅನುಮಾನವೇ ಇಲ್ಲ. ಇದು ಕಾರ್ಯಗತವಾಗಬೇಕಾದದು ಮುಖ್ಯ.

ಶ್ರೀ ಕಾಗೋಡು ತಿಮ್ಮಪ್ಪ.—ಕಳೆದ 10 ವರ್ಷಗಳಿಂದ ಸಾಗರ್ ತಾಲ್ಲೂಕಿನಲ್ಲಿ ಗೇರು ಸಾಗುವಳಿಗೆ ಕೊಟ್ಟ ಭೂಮಿಯನ್ನು ಅಭಿವೃದ್ಧಿ ಮಾಡದೇ, ಹೇರಳವಾಗಿ ಸಾವಿರಾರು ಎಕರೆ ಭೂಮಿ ಹಾಗೆ ಬಿದ್ದಿದೆ, ಆದುದರಿಂದ ಇದರ ಬಗ್ಗೆ ವಿಶೇಷವಾದಂಥ ತನಿಖೆಯನ್ನು ನಡೆಸಿ ಅಂಥ ಜಮೀನನ್ನು ವಾಪಸ್ಸು ಪಡೆಯುವುದಕ್ಕೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ನಾನು ಆ ಭಾಗದಲ್ಲಿ ವ್ಯವಾಸ ಮಾಡಿದಾಗ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತೆಗೆದುಕೊಂಡು ಬಂದರು. ನಾನು ಕೂಡಲೇ ನಮ್ಮ ಅಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿಸಿದ್ದೇನೆ. ಯಾರು ಯ್ಯಾರು ಶರತ್ತಿನ ಪ್ರಕಾರ ವ್ಯವಸಾಯ ಮಾಡಿಲ್ಲ ಆ ಜಮೀನನ್ನೆಲ್ಲಾ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಕಾರ್ಯಕ್ರಮವನ್ನು ತೆಗೆದುಕೊಳ್ಳುವುಕ್ಕೆ ತಿಳಿಸಿದ್ದೇನೆ. ಅವಶ್ಯವಿದ್ದರೆ ಸರ್ಕ್ಯುಲರ್ ಹೊರಡಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

OWNERSHIP OF LAND GRANTED ON LEASE FOR CASHEW CULTIVATION

191. SRI K.R. SRINIVASULU NAYUDU (Shanthinagar).—

Will the Minister for Revenue be pleased to state :—

(*a*) whether ownership rights are being conferred upon the people who have taken lands for cashewnut cultivation according to the terms of lease conditions ;

(*b*) whether it has come to the notice of Government that conferring of ownership rights to such people are kept pending even though they have fulfilled the conditions stipulated in lease agreement ;

(*c*) if so, the reasons for the same ;

(*d*) whether payment of any amount for getting ownership rights is insisted upon by Government on waste lands which are later developed for cashew cultivation ;